# ದಂಪತಿಯ ಸಮಚಿತ್ತ

'ಸರ್, ಪತ್ರಿಕೆಯ ಒಂದು ಪುಟದಲ್ಲಿ ಪ್ರತಿವರ್ಷ ಕ್ಯಾಲೆಂಡರ್ ಹಾಕುತ್ತೇವೆ. ಈ ಸಲ ತಮ್ಮ ಪತ್ನಿಯ ಫೋಟೊ ಬಳಸಿಕೊಳ್ಳಬೇಕು ಎಂದುಕೊಂಡಿದ್ದೇವೆ. ಅನುಮತಿ ಇದೆಯೇ'– ಪ್ರಶ್ನೆ.

'ಅದನ್ನು ನನಗ್ಯಾಕೆ ಕೇಳುವಿರಿ. ನನ್ನ ಹೆಂಡತಿಗೇ ಫೋನ್ ಮಾಡಿ ಕೇಳಿ. ಎಲ್ಲಕ್ಕೂ ನನ್ನನ್ನೇ ಕೇಳುವಿರೇ? ಇಲ್ಲವಲ್ಲ'– ಉತ್ತರ.

ಅದಕ್ಕೂ ಕೆಲವು ನಿಮಿಷ ಮೊದಲು ಆ ನಟನ ಪತ್ನಿಗೆ ಫೋನ್ ಮಾಡಲಾಗಿತ್ತು. ಅವರಿಂದ ಬಂದ ಉತ್ತರ– '...ಅವರನ್ನೂ ಒಂದು ಮಾತು ಕೇಳಿದ್ದರೆ ಚೆನ್ನಾಗಿತ್ತು.'

ಈ ಗಂಡ ಹೆಂಡತಿ ಹೀಗೆ ಪೇಚಿಗೆ ಸಿಲುಕಿಸಿರುವ ಹಲವು ಪ್ರಸಂಗಗಳು ಮಾಧ್ಯಮದವರಿಗಷ್ಟೇ ಅಲ್ಲ, ಸಿನಿಮಾದವರಿಗೂ ಎದುರಾಗಿವೆ. ಮದುವೆಯಾಗಿ ಎರಡು ಮಕ್ಕಳಾದ ಮೇಲೆ ನಟಿ ಮತ್ತೆ ಅಭಿನಯಿಸಲು ಸಿದ್ಧರಿದ್ದಾರೆ ಎಂಬ ಸುದ್ದಿ ಹಬ್ಬಿತು. ಅದು ಹೇಗೆ ಹಬ್ಬಿತೋ ಗೊತ್ತಿಲ್ಲ. ಫಿಟ್‌ನೆಸ್ ಕಾಯ್ದುಕೊಂಡಿದ್ದರಿಂದ ಹಾಗೂ ನೋಡಲು ಲಕ್ಷಣವಾಗಿ ಇರುವುದರಿಂದ ಕೆಲವರು ಕಾಲ್‌ಶೀಟ್ ಬಯಸಿ ಹೊರಟರು. ಆಗಲೂ 'ಅವರನ್ನೊಮ್ಮೆ ಕೇಳಬೇಕು' ಎಂಬ ಉತ್ತರಗಳು ಸಿಕ್ಕವು. 'ಅವರನ್ನು' ಕೇಳಿದರೆ ಸಿಗುತ್ತಿದ್ದ ಉತ್ತರ ಮೂಡ್ ಆಧರಿಸುತ್ತಿತ್ತು.

ಹೊಳೆಯಲ್ಲಿ ನೀರು ಹರಿಯಿತು. ಕಾಲ ಹೀಗೇ ಇರುವುದಿಲ್ಲವಲ್ಲ; ನಟೀಮಣಿ ತುಸು ಮೀಡಿಯೋಕರ್ ಆದರು. ಆಯ್ದ ಕೆಲವು ಪತ್ರಕರ್ತೆಯರಿಗೆ ಫೋನ್ ಮಾಡಲು ಆರಂಭಿಸಿದರು. ಕುಶಲೋಪರಿಯ ನಡುವೆಯೇ ಸಣ್ಣ ಸಣ್ಣ ಸುದ್ದಿಗಳನ್ನು ಹಂಚಿದರು.

ಆ ನಟಿಯ ಪತಿಯಿಂದ ಬೈಗುಳ ತಿಂದಿದ್ದ ಕನ್ನಡದ ನಿರ್ಮಾಪಕರಿಗೆ ಒಂದು ಸುದ್ದಿ ಓದಿ ಸಂಕಟವಾದದ್ದಂತೂ ನಿಜ. ಅದೇನೆಂದರೆ, ಆ ನಟಿ ಗುಟ್ಟಾಗಿ ಹೋಗಿ ಭೋಜ್‌ಪುರಿ ಸಿನಿಮಾಗಳಲ್ಲಿ ಅಭಿನಯಿಸಿ ಬರುತ್ತಿದ್ದುದು. ಡೇಟ್ಸ್ ಕೇಳಲು ಹೋಗಿ ಹ್ಯಾಪುಮೋರೆ ಹಾಕಿಕೊಂಡು ಬಂದವರಿಗೆ ಅಚ್ಚರಿಯಾಗದೇ ಇನ್ನೇನು. ಕೆಲವು ದಿನಗಳ ನಂತರ ಮಾಧ್ಯಮಗಳ ಮೂಲಕವೇ ನಟಿ ಮುಗುಮ್ಮಾಗಿ ಇನ್ನೊಂದು ಆಹ್ವಾನವನ್ನು ಕೊಟ್ಟರು. ಕನ್ನಡದಲ್ಲಿ ಒಳ್ಳೆಯ ವಸ್ತು, ಪಾತ್ರ ಇರುವ ಸಿನಿಮಾಗಳು ಬಂದರಷ್ಟೇ ಒಪ್ಪಿಕೊಳ್ಳುವುದು ಎಂದರು. ಆ ಮೂಲಕ ಅದುವರೆಗೆ ಬಂದ ಅವಕಾಶಗಳಲ್ಲಿ ದಮ್ಮಿಲ್ಲ ಎಂದು ಪರೋಕ್ಷವಾಗಿ ಹೇಳಿದಂತಾಯಿತು.

ಇಷ್ಟಾದ ಮೇಲೆ ಅವರು ಪತಿಯ ಜೊತೆಗೇ ಒಂದು ಸಿನಿಮಾದಲ್ಲಿ ಅಭಿನಯಿಸುವುದು ನಿಕ್ಕಿಯಾಯಿತು. ಸಿನಿಮಾ ಚಿತ್ರೀಕರಣ ವಿಳಂಬವಾಗುತ್ತಲೇ ಸಾಗಿತು. ಅದರ ಮಧ್ಯ ಇನ್ನಷ್ಟು ಭೋಜ್‌ಪುರಿ ಸಿನಿಮಾಗಳಲ್ಲಿ ಅಭಿನಯಿಸಿ ಬಂದರು. ಕಾಲ್‌ಶೀಟ್ ಸಿಗದ ನಿರ್ಮಾಪಕರು ಒಳಗೊಳಗೇ ಶಪಿಸುವುದು ಮುಂದುವರಿಯಿತು.

ಪತಿ ಪತ್ನಿ ಅಭಿನಯದ ಸಿನಿಮಾ ತೋಪಾಯಿತಾದರೂ ಇಬ್ಬರ ಮಾರುಕಟ್ಟೆಯೇನೂ ಕಡಿಮೆ ಆಗಲಿಲ್ಲ. ಪತಿ ಸಾಲು ಸಾಲು ತೋಪು ಸಿನಿಮಾಗಳಲ್ಲಿ ಅಭಿನಯಿಸಿದರೂ ಅವರ ವರ್ಚಸ್ಸು ಹಾಗೇ ಉಳಿಯಿತು. ಪತ್ನಿ ಜಾಹೀರಾತು ರೂಪದರ್ಶಿ ಕೂಡ ಆದರು. ಮೊನ್ನೆ ಮೊನ್ನೆ ಅವರದ್ದೇ ಹೆಸರಿನ ಸಿನಿಮಾ ತೆರೆಕಂಡು ಸೋತಿತು. ಹೀಗಿದ್ದೂ ಪತಿ ಪತ್ನಿಯ ಧೋರಣೆಯಲ್ಲಿ ಅದೇ ಸ್ಥಿರತೆ ಉಳಿದಿದೆ.

● ವಿಶಾಖ ಎನ್.

Printed and Published by B A Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68